## ಕಲಾತ್ಮಕ ಮನೆ

ಈ ಕಲಾತ್ಮಕವಾದ ಮನೆಯು ಹುಬ್ಬಳ್ಳಿ ಸಮೀಪದ ಕುಸ್ನೂರು ಗ್ರಾಮದಲ್ಲಿರುವ ಅಗಡಿ ತೋಟದಲ್ಲಿದೆ. ಸಂಪೂರ್ಣ ದೇಸಿ ಸೊಗಡಿನಿಂದ ಕೂಡಿದ ಅಗಡಿ ತೋಟ ಪ್ರವಾಸಿಗರನ್ನು ಸೆಳೆಯುತ್ತದೆ. ಇತ್ತೀಚಿನ ದಿನಗಳಲ್ಲಿ ನಾವು ಮರೆತಿರುವ ಹಳೆಯ ಕಬ್ಬಿನ ಗಾಣ, ಬೀಸುವ ಕಲ್ಲು, ಒರಳು, ಎತ್ತಿನ ಬಂಡಿ, ಕುದುರೆ ಗಾಡಿ ಎಲ್ಲವನ್ನೂ ಇಲ್ಲಿ ಕಾಣಬಹುದು. ಈ ಮನೆಯ ಒಳಭಾಗ ಬೇಸಿಗೆಯಲ್ಲೂ ಕೂಡ ತಂಪಾದ ಅನುಭವವನ್ನು ನೀಡುತ್ತದೆ.

**-ಗೌರಿ ಚಂದ್ರಕೇಸರಿ, ಶಿವಮೊಗ್ಗ**





## ಬಣವೆ ಹತ್ತುವ ಹಸುಗಳು!

ಹಸಿದು ಬಂದ ಹಸುಗಳು ಗಬಗಬನೆ ಹುಲ್ಲನ್ನು ತಿನ್ನುವ ದೃಶ್ಯವನ್ನು ನಾವೆಲ್ಲಾ ನೋಡಿದ್ದುಂಟು. ಅಂತಹ ಹಸುಗಳು ತುಂಟತನದಿಂದಲೋ, ಅವಸರದಿಂದಲೋ ಅಥವಾ ಪೈಪೋಟಿಯಿಂದಲೋ ಹುಲ್ಲಿನ ಬಣವೆಯನ್ನೇ ಏರುವ ದೃಶ್ಯ ಕಾಣಬೇಕೆ? ಹಾಗಿದ್ದರೆ ರಾಯಚೂರು ಜಿಲ್ಲೆಯ ಗಡಿಯಲ್ಲಿರುವ ಬಿಚ್ಚಾಲೆಗೆ (ಮಂತ್ರಾಲಯದ ಹತ್ತಿರ) ಬನ್ನಿ. ದೂರದ ಬಯಲುಗಳಿಗೆ ಮೇಯಲು ಹೋದ ಹಸುಗಳು, ಎತ್ತುಗಳು ತುಂಗಾ ನದಿಯನ್ನು ಸಂಜೆಯ ಸಮಯದಲ್ಲಿ ಈಜಿಕೊಂಡು ದಾಟಿ (ತುಂಗೆ ಬರಿದಾಗಿರುವುದರಿಂದ ಹಸುಗಳು ಈಜಲು ಸಾಧ್ಯ), ಬಿಚ್ಚಾಲೆಯ ದೇಗುಲದ ಹತ್ತಿರ ಇರುವ ಗೋ ಸಾಕಣೆ ಕೇಂದ್ರಕ್ಕೆ ಬರುತ್ತವೆ. ಬಂದ ಕೂಡಲೆ, ಅಲ್ಲಿರುವ ಒಣ ಹುಲ್ಲಿನ ಬಣವೆಗೆ ದಾಳಿ ಮಾಡುತ್ತವೆ! ಸುತ್ತಲೂ ಹರಡಿರುವ ಒಣ ಹುಲ್ಲನ್ನು ಗಬಗಬನೆ ತಿನ್ನುವ ಅವುಗಳ ಆತುರ ನೋಡಬೇಕು! ಈ ಮಧ್ಯೆ ಸಾಹಸಿ ಅಥವಾ ತುಂಟ ಗುಣ ಹೊಂದಿರುವ ಒಂದೆರಡು ಹಸುಗಳು ಒಣ ಹುಲ್ಲಿನ ಬಣವೆಯನ್ನೇ ಏರಿ, ತುತ್ತ ತುದಿಯಲ್ಲಿ ನಿಂತು, ಒಣ ಹುಲ್ಲನ್ನು ತಿನ್ನುವ ದೃಶ್ಯ ಇದು!

**ಚಿತ್ರ- ಬರಹ: ಎಂ.ಶಶಿಧರ ಹಾಲಾಡಿ, ಬೆಂಗಳೂರು**

## ಅಪರೂಪದ ಅತಿಥಿಗಳು

ಮೇ ತಿಂಗಳಿನಲ್ಲಿ ಮೊದಲ ಮಳೆ ಬಿದ್ದ ಮರುದಿನ ಬೆಳಿಗ್ಗೆ ಬೆಂಗಳೂರಿನ ಪಾಂಡುರಂಗ ನಗರ ಬಡಾವಣೆಯ ರಸ್ತೆಯೊಂದರಲ್ಲಿ ನೂರಾರು ಶಂಖ (ಬಸವನ ಹುಳು)ದ ಹುಳುಗಳು ಅಪರೂಪದ ಅತಿಥಿಗಳಾಗಿ ಆಗಮಿಸಿದ್ದವು. ಇವು ಆರೆಂಟು ಅಂಗುಲ ಉದ್ದ ಹಾಗೂ ಎರಡಂಗುಲ ಎತ್ತರವಿದ್ದವು. ಮಳೆಗಾಲದಲ್ಲಿ ಆಗೊಮ್ಮೆ ಈಗೊಮ್ಮೆ ಇಂತಹ ಕೆಲವು ಹುಳುಗಳು ರಸ್ತೆಯಲ್ಲಿ ಹರಿದಾಡುತ್ತಿದ್ದುದನ್ನು ಕಂಡಿದ್ದೆನಾದರೂ, ಒಮ್ಮೆಲೇ ಇಷ್ಟು ಅಪಾರ ಸಂಖ್ಯೆಯಲ್ಲಿ ಪ್ರತ್ಯಕ್ಷವಾದ ದೊಡ್ಡ ಗಾತ್ರದ ಮೃದ್ವಂಗಿಗಳ ದಂಡು ಅಚ್ಚರಿ ಮೂಡಿಸಿತು. ಸಾಲದೆಂಬಂತೆ, ಬದಿಯ ಖಾಲಿ ನಿವೇಶನವೊಂದರಲ್ಲಿ ತೊಯ್ದ ತರಗೆಲೆಗಳ ನಡುವೆ ನೆಲೆಸಿದ್ದ ಮತ್ತಷ್ಟು ಶಂಖದ ಹುಳುಗಳನ್ನು ಗುರ್ತಿಸಲು ಹರಸಾಹಸ ಪಡಬೇಕಾಯಿತು! ಪ್ರತ್ಯಕ್ಷವಾದಷ್ಟೇ ಕ್ಷಿಪ್ರವಾಗಿ ಅಂತರ್ದಾನವಾದ ಈ ಜೀವಿಗಳು ಕೌತುಕಕ್ಕೆ ಕಾರಣದವು.

**-ಮಂಜುನಾಥ ಡಿ.ಎಸ್., ಬೆಂಗಳೂರು**

